ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮೊತ್ತದಲ್ಲಿ ಪ್ರವರ್ಗ–1, 2ಎಗೆ ಶೇಕಡಾ 70ರಷ್ಟು ಹಾಗೂ ಪ್ರವರ್ಗ–3ಎ, 3ಬಿಗೆ ಶೇಕಡಾ 30ರಷ್ಟು ಅನುಪಾತದಲ್ಲಿ ಯೋಜನೆ ಸೌಲಭ್ಯ ಒದಗಿಸಲಾಗುತ್ತಿದೆ.

ಡಾ:ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ:

ಪರಿಶಿಷ್ಟ ಜಾತಿಗೆ ಸೇರಿದ ಉಪಜಾತಿಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:

ಪರಿಶಿಷ್ಟ ಪಂಗಡದವರಿಗೆ ಈ ಯೋಜನೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಇ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ ಯೋಜನೆಯಲ್ಲಿ ಹೆಚ್ಚಿಗೆ ಅನುದಾನವನ್ನು ಒದಗಿಸಲಾಗುವುದೇ;

ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 2008–09ನೇ ಸಾಲಿಗೆ 3080 ಲಕ್ಷ ರೂ.ಗಳ ಅನುದಾದ ಒದಗಿಸಲಾಗಿದೆ. ಈ ಮೊತ್ತ ಕಳೆದ ವರ್ಷಗಳಲ್ಲಿ ಒದಗಿಸಿದ ಮೊತ್ತಕ್ಕಿಂತ ಹೆಚ್ಚಿಗೆ ಇರುತ್ತದೆ. ಈ ವರ್ಗಗಳ ಹೆಚ್ಚು ಜನರಿಗೆ ಸೌಲಭ್ಯ ನೀಡಲು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಅನುದಾನ ನೀಡಲಾಗುತ್ತಿದೆ.

ಈ ಹಾಗಿಲ್ಲದಿದ್ದಲ್ಲಿ, ಅತಿ ದೊಡ್ಡ ಸಂಖ್ಯೆಯಲ್ಲಿ ಇರುವ ಈ ಜನಾಂಗದ ಬಡ ಕುಟುಂಬಗಳಿಗೆ ಅನ್ಯಾಯ ವಾಗುವುದಿಲ್ಲವೆ;

ನಿಗದಿತ ಅನುದಾನ ಮೊತ್ತಕ್ಕೆ ಅನುಗುಣವಾಗಿ ಗುರಿ ನಿಗಧಿಪಡಿಸಿ ಹೆಚ್ಚಿನ ಸಂಖ್ಯೆಯ ಹಿಂದುಳಿದ ವರ್ಗಗಳ ಜನರಿಗೆ ಯೋಜನೆ ಸೌಲಭ್ಯ ನೀಡಲಾಗುತ್ತಿದೆ. ಜನಾಂಗದ ಬಡ ಕುಟುಂಬಗಳಿಗೆ ಅನ್ಯಾಯವಾಗುವ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಉ ಹಾಗಿದ್ದಲ್ಲಿ, ಇದನ್ನು ಸರಿ ಪಡಿಸಲು ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು?

ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಅನುದಾನ ಒದಗಿಸಲು ಬೇಡಿಕೆ ಇರುವ ವಿಷಯವು ಗಮನಕ್ಕೆ ಬಂದಿದ್ದು, ಹೆಚ್ಚಿನ ಅನುದಾನ ಒದಗಿಸುವ ಬಗ್ಗೆ ಚಿಂತನೆಯಲ್ಲಿರುತ್ತದೆ.

ಗಂಗಾ ಕಲ್ಯಾಣದಲ್ಲಿ ಸಾಮೂಹಿಕ ಏತ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವುದು

4ಶ್ರೀ ಸಿದ್ದು ಸವದಿ (ತೆರೆದಾಳ್)

ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ತೇರದಾಲ ಮತ ಕ್ಷೇತ್ರದಲ್ಲಿರುವ ಒಟ್ಟು ಸರಕಾರಿ ಪಿ.ಹೆಚ್.ಸಿ ಮತ್ತು ಸಿ.ಎಚ್.ಸಿ. ಆಸ್ಪತ್ರೆಗಳ ಸಂಖ್ಯೆ ಎಷ್ಟು?

ತೇರದಾಳ ಮತಕ್ಷೇತ್ರದಲ್ಲಿ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಆ ಈ ಎಲ್ಲಾ ಕೇಂದ್ರಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?

ಈ ಎಲ್ಲಾ ಕೇಂದ್ರಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ 131 ಹಾಗೂ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ 86

ಇ ಖಾಲಿಯಿರುವ ವೈದ್ಯರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ರಂಬನಹಟ್ಟಿ ಮತ್ತು ಮಹಾಲಿಂಗಪುರ ದಲ್ಲಿ ಕ್ರಮವಾಗಿ ಒಂದೊಂದು ವೈದ್ಯರ ಹುದ್ದೆ ಖಾಲಿ ಇದೆ. ಖಾಲಿ ವೈದ್ಯರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಈ ತೇರದಾಳ ಕ್ಷೇತ್ರದಲ್ಲಿ ಇನ್ನೂ 4 ಹೊಸ ಪಿ.ಎಚ್.ಸಿಗಳ ಬೇಡಿಕೆ ಇದ್ದು ಅವುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಮಾರ್ಗಸೂಚಿ ಪ್ರಕಾರ ತೇರದಾಳ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇರುವುದಿಲ್ಲ.

ಉ ಈಗಿರುವ ಕೇಂದ್ರಗಳಿಗೆ ಸರಕಾರದಿಂದ ಒದಗಿಸುತ್ತಿರುವ ಸೌಲಭ್ಯಗಳು ಯಾವುವು?

ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 6 ಹಾಸಿಗೆಗಳ ಸೌಲಭ್ಯ ಇದ್ದು ವೈದ್ಯರು–1, ಲೇಡಿ ಹೆಲ್ತ್ ವಿಸಿಟರ್ಸ್ –1, ಫಾರ್ಮಾಸಿಸ್ಟ್–1, ಶುಶ್ರೂಷಕರು–1, ಲ್ಯಾಬ್ ಟೆಕ್ನಿಷಿಯನ್–1, ಕಿರಿಯ ಆರೋಗ್ಯ ಸಹಾಯಕರು–1 ರಿಂದ 2, ಗ್ರೂಪ್–ಡಿ–1 ಸಿಬ್ಬಂದಿ ಇರುತ್ತಾರೆ. ಪ್ರತಿ ಸದರಿ ಕೇಂದ್ರಕ್ಕೆ ಔಷಧಿಗಾಗಿ ರೂ.1 ಲಕ್ಷ ಅನುದಾನ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಕಾರ್ಯಕ್ರಮದಡಿಯಲ್ಲಿ ರೂ.75,000/– ಮುಕ್ತನಿಧಿ/ನಿರ್ವಹಣೆ ಮೊತ್ತವನ್ನು ಒದಗಿಸಲಾಗಿದೆ.

ಪ್ರತಿ ಸಮುದಾಯ ಆರೋಗ್ಯ ಕೇಂದ್ರ 30 ರಿಂದ 50 ಹಾಸಿಗೆಗಳ ಸೌಲಭ್ಯ ಹೊಂದಿರುತ್ತದೆ. ಹಾಗೂ ಸದರಿ ಕೇಂದ್ರದಲ್ಲಿ ತಜ್ಞರು–4, ದಂತ ವೈದ್ಯರು–1, ಶುಶ್ರೂಷಕರು–6, ಫಾರ್ಮಾಸಿಸ್ಟ್ 1 ರಿಂದ 2, ಲ್ಯಾಬ್‌ಟೆಕ್ನಿಷಿಯನ್ –1, ಲೇಡಿ ಹೆಲ್ತ್ ವಿಸಿಟರ್ಸ್–1, ಗ್ರೂಪ್–ಡಿ–6, ಸಮಾಲೋಚಕರು–1 ಸಿಬ್ಬಂದಿ ಇರುತ್ತಾರೆ. 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ರೂ. 4 ಲಕ್ಷದಂತೆ ಹಾಗೂ 50 ಹಾಸಿಗೆಗಳ ಕೇಂದ್ರಕ್ಕೆ ರೂ.6 ಲಕ್ಷದಂತೆ ಔಷಧಿ ಖರೀದಿಗಾಗಿ ಅನುದಾನ ಕಲ್ಪಿಸಲಾಗಿದೆ. ಇದಲ್ಲದೆ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ

ಅಭಿಯಾನದ ಕಾರ್ಯಕ್ರಮದಡಿಯಲ್ಲಿ ರೂ.1,50,000 ಮುಕ್ತನಿಧಿ/ನಿರ್ವಹಣೆ ಮೊತ್ತವನ್ನು ಒದಗಿಸಲಾಗಿದೆ.

ಮೇಲ್ಕಂಡ ಆರೋಗ್ಯ ಕೇಂದ್ರಗಳು ಸಾರ್ವಜನಿಕರಿಗೆ ಉಚಿತ ಆರೋಗ್ಯ ಸೌಲಭ್ಯವನ್ನು ಒದಗಿಸುತ್ತಿವೆ.

5 ಶ್ರೀ ಸಿದ್ದು ಸವದಿ (ತೆರೆದಾಳ್) ಎಂ.ಎಲ್
ಪ್ರೊಡಾ:ಮುಮ್ತಾಜ್ ಆಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಂದ 2008–09ಕ್ಕೆ ಕೊಟ್ಟಿರುವ ಒಟ್ಟು ಸೌಲಭ್ಯಗಳೆಷ್ಟು (ಕ್ಷೇತ್ರವಾರು ಮತ್ತು ಯೋಜನವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ.

ಆ ಶಾದಿ ಮಹಲ್ ಮತ್ತು ಗಂಗಾ ಕಲ್ಯಾಣದಂತಹ ಸೌಲಭ್ಯಗಳನ್ನು ಕೊಡಲು ಇರುವ ನಿಯಮಾವಳಿಗಳೇನು; 2008–09ರಲ್ಲಿ ತೆರದಾಳ ಮತಕ್ಷೇತ್ರಕ್ಕೆ ಕೊಟ್ಟಿ ಸಂಖ್ಯೆ ಎಷ್ಟು;

ಅನುಬಂಧ–2ರಲ್ಲಿ ಒದಗಿಸಲಾಗಿದೆ.

1) 2008–09ನೇ ಸಾಲಿನಲ್ಲಿ ಮಸ್ಜಿದೆ ಅಕ್ಸ್ ಶಾದಿಮಹಲ್ ದೇವರಾಜ ನಗರ, ದುರ್ಗನ್ನರ್ ತೆರೆದಾಳ್, ಜಮಖಂಡಿ ತಾಲ್ಲೂಕ್ ಬಾಗಲಕೋಟೆ ಜಿಲ್ಲೆ ಇವರಿಗೆ ರೂ.5.00 ಲಕ್ಷಗಳ ಅನುದಾನ ಮಂಜೂರಾಗಿದೆ.

2) 2008–09ನೇ ಸಾಲಿನಲ್ಲಿ ತೆರೆದಾಳ್ ಮತಕ್ಷೇತ್ರಕ್ಕೆ ಗಂಗಾ ಕಲ್ಯಾಣ ಯೋಜನೆಯಡಿ 3 ವೈಯಕ್ತಿಕ ಕೊಳವೆ ಬಾವಿಗಳ ಗುರಿಯನ್ನು ನೀಡಲಾಗಿದೆ.

ಇ ಇಲಾಖೆಯ ಬಹುತೇಕ ಸೌಲಭ್ಯಗಳನ್ನು ಕೆಲವೊಂದು ಕ್ಷೇತ್ರಗಳಿಗೆ ಮಾತ್ರ ಮೇಲಿಂದ ಮೇಲೆ ಒದಗಿಸುತ್ತಿರುವುದು; ನಿಜವೇ ಹಾಗಿದ್ದಲ್ಲಿ, 2005ರಿಂದ ಇಲ್ಲಿಯವರೆಗೆ ಒದಗಿಸಿದ ಅನುದಾನ ಮೊತ್ತವೆಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು)?

ಉದ್ಭವಿಸುವುದಿಲ್ಲ